ಈ ದಿನ ದಿನಾಂಕಃ09-02-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಹೆಚ್ ಟಿ ವಕೀಲರಿಂದಃ</u>

ಈ ದಾವೆಯೊಂದಿಗೆ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇದೆ. ಈ ದಾವೆ ಸಲ್ಲಿಸುವ ಸಮಯಕ್ಕೆ ದಾವಾಸ್ತಿಯ ಖಾತೆ 2ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಸದರಿಯವರ ತಾಯಿಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಈ ದಾವೆಯನ್ನು ನಾನು 2008 ರಲ್ಲಿ ಆದ ನಿಪಿ-1 ರಂತೆ ನನ್ನ ಹೆಸರಿಗೆ ಖಾತೆ ಆಗದಿರುವ ಕುರಿತು ಹೂಡಿದ್ದೆನೆ ಎಂದರೆ ಸರಿ. ಸದರಿ ನಿಪಿ-1 ರಂತೆ ದಾವಾಸ್ತಿ ನನಗೆ, ಪಾರ್ವತಮ್ಮನವರಿಗೆ ಮತ್ತು ನನ್ನ ತಂದೆ ನಾಗೇಂದ್ರಪ್ಪನವರ ಪಾಲಿಗೆ ಬಂತು ಎಂದರೆ ಸರಿ. ಸದರಿ ನಿಪಿ-1ರ ಆಧಾರದ ಮೇಲೆ ನಾನು ಇಲ್ಲಿನವರೆಗೂ ಏಕೆ ಖಾತೆ ಮಾಡಿಸಿಕೊಳ್ಳಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-1 ರಲ್ಲಿ ನನ್ನ ತಂದೆಯಾದ ಮೃತ ನಾಗೆಂದ್ರಪ್ಪನಿಗೂ ಹಿಸ್ಸಾ ಹಕ್ಕು ಇದೆ ಎಂದರೆ ಸರಿ.

ನನ್ನ ಅಕ್ಕನಾದ ರತ್ನಮ್ಮ ಎನ್ನುವವರು ಅಸಲು ದಾವಾ ನಂ 35/2022 ರಂತೆ ಪಾಲುವಿಭಾಗ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ವಜಾ ಆಯಿತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಹ ಪ್ರತಿವಾದಿ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನಮ್ಮ ವಕೀಲರ ಮೂಲಕ ಹಾಜರಾಗಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಸಮಾನದ ಹಿಸ್ಸಾ ಹಕ್ಕು ಇದೆ ಎಂದು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು 2008 ರಲ್ಲಿ ನಿಪಿ-1 ರ ದಾವೆಯನ್ನು ನಾನೇ ಹೂಡಿದ್ದು, ಸದರಿ ದಾವೆಯಲ್ಲಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳ ಕೆಲವು ಆಸ್ತಿಗಳನ್ನು ಹೊರತುಪಡಿಸಿ ಸದರಿ ದಾವೆ ಹೂಡಿದ್ದೆ ಎಂದರೆ ಸರಿ. ಸದರಿ ಹೊರತುಪಡಿಸಿದ ಆಸ್ತಿಗಳೆಂದರೆ ಸರ್ವೆ ನಂ 18/1 ರ 28 ಗುಂಟೆ, ಸರ್ವೆ ನಂ 6/6 ರ 5 ಗುಂಟೆ ಹಾಗೂ ಚೆನ್ನೇಶಪುರ ಗ್ರಾಮದ ಒಂದು ಅಂಕಣದ ಕರೆ ಹೆಂಚಿನ ಮನೆ. ಎಂದರೆ ಸರಿ. ಸದರಿ 3 ಆಸ್ತಿಗಳು ಸಹ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ.

ಸರ್ವೆ ನಂ 18/1 ರ ಆಸ್ತಿ ನನ್ನ ತಾಯಿ ಮತ್ತು ನನ್ನ ಅಣ್ಣನಾದ ಬಸವರಾಜಪ್ಪ ಮತ್ತು ನನ್ನ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ಸದರಿ 3 ಅಸ್ತಿಗಳನ್ನು 2008 ರಲ್ಲಿ ಪಾಲುವಿಭಾಗಕ್ಕಾಗಿ ದಾವೆ ಹೂಡಿದಾಗ ನಾನು ಅವುಗಳನ್ನು ಸೇರಿಸಿಲ್ಲ ಎಂದರೆ ಸರಿ. ಹಾಗಾಗಿ 2008 ರಲ್ಲಿ ಆದ ನಿಪಿ-1 ರಂತೆ ಆದ ರಾಜಿ ಡಿಕ್ರಿ ಪರಿಪೂರ್ಣವಲ್ಲ ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಒಟ್ಟು ಆಸ್ತಿಗಳನ್ನು ಸೇರಿಸಿ ನಿಪಿ-1 ರ ದಾವೆ ಸಮಯಕ್ಕೆ 2 ನೇ ಪ್ರತಿವಾದಿ ಅಲ್ಪವಯಸ್ಕರು ಆಗಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ಈ ದಾವೆಗೆ ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ತಕರಾರಿನ ಬಗ್ಗೆ ನಮ್ಮ ವಕೀಲರ ಮೂಲಕ ತಿಳಿದಕೊಳ್ಳಲು ನನಗೇನು ತೊಂದರೆಯಿಲ್ಲ. ಸರ್ವೆ ನಂ 19/2 ರ ಆಸ್ತಿ 1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿಯ ತಂದೆಯಾದ

ಬಸವರಾಜಪ್ಪನವರು ಸ್ವಂತಕ್ಕೆ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಸದರಿ ಆಸ್ತಿ ಪಿತ್ರಾರ್ಜಿತ ಎಂದು ನುಡಿಯುತ್ತಾರೆ. ಸರ್ವೆನಂ 6/6 ರ ಆಸ್ತಿಯು ಸಹ ಬಸವರಾಜಪ್ಪನವರು ಸ್ವಂತಕ್ಕೆ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಪಿತ್ರಾರ್ಜಿತ ಎಂದು ನುಡಿಯುತ್ತಾರೆ. ಸದರಿಯವರು ಖರೀದಿಸಿದದ ನಂತರ ಸರ್ವೆ ನಂ 19/2 ಮತ್ತು 6/6 ರ ಆಸ್ತಿಗಳು ಬಸವರಾಜಪ್ಪನವರ ಹೆಸರಿನಲ್ಲಿ ಖಾತೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 28-03-1994 ರ ಎಸ್ ಆರ್ ಓ ನಂ 2466/1993-94 ರ ಕ್ರಯಪತ್ರದ ನಕಲಾಗಿದ್ದು, ಸದರಿ ದಾಖಲೆಯಂತೆ ಸರ್ವೆ ನಂ 19/2 ರ 2 ಎಕರೆ ಆಸ್ತಿ ಚೆನ್ನೇಶಪುರ ಗ್ರಾಮದ ಬಸವರಾಜ ಯಾನೇ ಮಂಜಪ್ಪ, ಮಂಜುನಾಥ ಬಿನ್ ನಾಗಪ್ಪ ಯಾನೇ ನಾಗೇಂದ್ರಪ್ಪ ಇವರಿಗೆ ಚೆನ್ನೇಶಪುರ ಗ್ರಾಮದ ವಾಸಿಗಳಾದ ನಿಂಗಮ್ಮ ಕೋಂ ಚೌಡಜ್ಜರ ಸಿದ್ದಪ್ಪ ಮತ್ತು ಸಿದ್ದಪ್ಪ ಬಿನ್ ಚೆನ್ನಪ್ಪರವರು ಸೇರಿ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಹಾಗಾಗಿ ಸದರಿ ಸರ್ವೆ ನಂ 19/2 ರ ಆಸ್ತಿ ಬಸವರಾಜ ಯಾನೇ ಮಂಜಪ್ಪ, ಹಾಗೂ 1 ಮತ್ತು 2 ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಬಸವರಾಜ ಯಾನೇ ಮಂಜಪ್ಪರವರು ಮೃತಪಟ್ಟ ನಂತರ ಸದರಿ ಆಸ್ತಿಯ ಹಾತೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಖಾತೆಯಾದ ನಂತರ 1 ನೇ ಪ್ರತಿವಾದಿ ತನ್ನ ಒಬ್ಬಳೇ ಮಗಳಾದ 2 ನೇ ಪ್ರತಿವಾದಿಗೆ ದಿಃ30-10-2021 ರಂದು ನಿಪಿ- 14 ರಂತೆ ನೊಂದಾಯಿತ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-14 ರ ನಂತರ 2 ನೇ ಪ್ರತಿವಾದಿಯ ಹೆಸರಿಗೆ ಸದರಿ ಆಸ್ತಿಯ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ನಿಪಿ-14 ರ ಖಾತೆ ಬದಲಾವಣೆ ಸಮಯಕ್ಕೆ ನಾನು ಸಂಬಂಧಪಟ್ಟ ಕಚೇರಿಗೆ ತಕರಾರನ್ನು ಸಲ್ಲಿಸಿರುತ್ತೇನೆ. ಸದರಿ ತಕರಾರನ್ನು ಯಾವ ದಿನಾಂಕದಂದು ಸಲ್ಲಿಸಿದೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನಾನು ಯಾವುದೇ ತಕರಾರನ್ನು ಸಲ್ಲಿಸದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ನಿಪಿ-14 ರ ಆಸ್ತಿ ಬಸವರಾಜಪ್ಪನವರ ಸ್ವಯಾರ್ಜಿತ ಆಸ್ತಿಯಾದ ಕಾರಣ ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ತಕರಾರಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸದರಿ ಸರ್ವೆ ನಂ 19/2 ರ 1 ಎಕರೆ ಆಸ್ತಿಯ ಕುರಿತು ಉಪವಿಭಾಧಿಕಾರಿಗಳ ನ್ಯಾಯಾಲಯ ಹೊನ್ನಾಳಿಯವರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣ ಈ ನ್ಯಾಯಾಲಯದಲ್ಲಿ ಚಾಲ್ತಿಯಿರುವ ಸಮಯದಲ್ಲಿ ನಾನು ಎ ಸಿ

ನ್ಯಾಯಾಲಯಕ್ಕೆ ಏಕೆ ಅರ್ಜಿ ಸಲ್ಲಿಸಿದೆ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಖಾತೆ ಮತ್ತು ಪಹಣಿ ಮಾಡಿಕೊಂಡ ಕಾರಣ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ-11 ರಲ್ಲಿ 1 ನೇ ಪ್ರತಿವಾದಿಯ ವಿಳಾಸವನ್ನು ಚೆನ್ನೇಶಪುರ ಗ್ರಾಮ ಚನ್ನಗಿರಿ ತಾಃ ಎಂದು ನಮೂದಿಸಿದ್ದು ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯ ವಿಳಾಸವನ್ನು ಬುಸ್ಸೆನಹಳ್ಳಿ ಗ್ರಾಮ ಚನ್ನಗಿರಿ ತಾಃ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿ ಪ್ರಸ್ತುತ ಬುಸ್ಸೆನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ನಿಪಿ-11 ರಲ್ಲಿ 2 ನೇ ಪ್ರತಿವಾದಿಯನ್ನು ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವರ ತಾಯಿಯನ್ನು ಮಾಡಿದ್ದೆನೆ ಎಂದು ನುಡಿಯುತ್ತಾರೆ.

ಹಾಗಾಗಿ ನಾನು ಮೋಸದಿಂದ ನಿಪಿ-11 ರಂತೆ ಆದೇಶ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-11 ರಲ್ಲಿ ಉಲ್ಲೇಖವಿರುವ ಪ್ರತಿವಾದಿಗಳ ವಿಳಾಸವನ್ನುತಪ್ಪಾಗಿ ನಮೂದಿಸಿ ಅವರಿಗೆ ನೋಟಿಸನ್ನ ಜಾರಿಮಾಡದೇ ನಿಪಿ-11 ರಂತೆ ಆದೇಶ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ-11 ರ ಅದೇಶ ಪಡೆಯುವ ಮುನ್ನ ನಾನು ಸಲ್ಲಿಸಿದ ಅರ್ಜಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿಯಿರುವ ಕುರಿತು ನಮೂದಿಸಿದ್ದೆನೆ ಎಂದರೆ ಸರಿ. ಹಾಗಾಗಿ ನಾನು ಎ ಸಿ ನ್ಯಾಯಾಲಯದಲ್ಲಿ ಸದರಿ ಆಸ್ತಿಯ ದಾವೆ ನ್ಯಾಯಾಲಯದಲ್ಲಿ ಬಾಕಿಯಿರುವ ಕುರಿತು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.

ದಿನಾಂಕಃ 20-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ**

ಈ ದಾವೆಗೆ ಸಲ್ಲಿಸಿರುವ ದಾಖಲಾತಿಗಳನ್ನು ನಾನೇ ಹೇಳಿ ತೆಗೆಸಿರುತ್ತೇನೆ. ಸದರಿ ದಾಖಲೆಗಳು ಯಾವುವು ಎಂದರೆ ಸಾಕ್ಷಿ ಈಗ ಹೇಳಿರುವ ದಾಖಲೆಗಳೇ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ದಾವಾಸ್ತಿಯ ಒಟ್ಟು ವಿಸ್ತೀರ್ಣ 12 ಎಕರೆ 7 ಗುಂಟೆ ಎಂದರೆ ಸರಿ. 1 ನೇ ದಾವಾಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನನ್ನ ತಂದೆಯ ಪಾಲಿಗೆ 2 ಎಕರೆ 9 ಗುಂಟೆ ಆಸ್ತಿ ಜುಬಾನಿ ಹಿಸ್ಸಾ ಮೂಲಕ ಬಂದಿದೆ ಎಂದರೆ ಸರಿ. ಸದರಿ 2 ಎಕರೆ 9 ಗುಂಟೆ ಆಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ ಗೋಣೆಪ್ಪರ ಅಂಬುಜಪ್ಪ ಮತ್ತು ಶಿವಣ್ಣನ ಆಸ್ತಿ, ಪಶ್ಚಿಮಕ್ಕೆ ಶಿವರುದ್ರಪ್ಪನ ಆಸ್ತಿ, ಉತ್ತರಕ್ಕೆ ಟಿ ಹನುಮಂತಪ್ಪ ಮತ್ತು ಹಾಲಪ್ಪನವರ ಆಸ್ತಿ ಎಂದರೆ ಸರಿ., ದಕ್ಷಿಣಕ್ಕೆ ಹನುಮಂತಪ್ಪನವರ ಪಾಲಿಗೆ ಬಂದಿರುವ ಇದೇ ಸರ್ವೆ ನಂ 142 ರ 12 ಎಕರೆ 7 ಗುಂಟೆ ಪೈಕಿ ಜಮೀನು ಎಂದರೆ ಸರಿ.

2 ನೇ ದಾವಾಸ್ತಿ ಒಟ್ಟು ವಿಸ್ತೀರ್ಣ 5 ಎಕರೆ 35 ಗುಂಟೆ ಪೈಕಿ ನನ್ನ ತಂದೆ ಪಾಲಿಗೆ 1 ಎಕರೆ 38 ಗುಂಟೆ ಆಸ್ತಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 38 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಸಾವಿತ್ರಮ್ಮನ ಆಸ್ತಿ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಚೆಲ್ಲಾ ಕೃಷ್ಣಮೂರ್ತಿಯವರ ಆಸ್ತಿ, ದಕ್ಷಿಣಕ್ಕೆ ಇದೇ ಸರ್ವೆ ನಂಬರಿನಲ್ಲಿ ಟಿ ಹನುಮಂತಪ್ಪನ ಪಾಲಿಗೆ ಬಂದಿರುವ 5 ಎಕರೆ 35 ಗುಂಟೆ ಪೈಕಿ ಇನ್ನುಳಿದ ಜಮೀನು ಎಂದರೆ ಸರಿ.

3 ನೇ ದಾವಾಸ್ತಿಯಾದ ಚಿರಡೋಣಿ ಗ್ರಾಮದ ಸರ್ವೆ ನಂ 136/5 ರಲ್ಲಿ ವಿಸ್ತೀರ್ಣ 2 ಎಕರೆ 9 ಗುಂಟೆ ಯಲ್ಲಪ್ಪನ ತಮ್ಮ ತುಳಜಪ್ಪನ ಮಗ ಹಳ್ಳಪ್ಪನ ಪಾಲಿಗೆ ಬಂದಿರುವ ಆಸ್ತಿ ಎಂದರೆ ಸರಿ. ಈ ದಾವೆಯ 1 ರಿಂದ 3 ಮತ್ತು5 ನೇ ದಾವಾಸ್ತಿಗಳ ವಿಚಾರವಾಗಿ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಚನ್ನಗಿರಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ 91/2015 ರಂತೆ ಈ ಹಿಂದೆ ದಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 2 ನೇ ಪ್ರತಿವಾದಿ ಎಂದರೆ ಸರಿ. ಸದರಿ ದಾವೆ ದಿಃ03-08-2019 ರಂದು ವಜಾ ಆಗಿದೆ ಎಂದರೆ ಸರಿ. ಸದರಿ 1 ರಿಂದ 3 ಮತ್ತು 5 ನೇ ದಾವಾಸ್ತಿಗಳು ನಮ್ಮ ತಂದೆಗೆ ಸಂಬಂಧಪಟ್ಟ ಸಂಪೂರ್ಣ ಆಸ್ತಿಗಳು ಅಲ್ಲ ಎಂದರೆ ಸರಿ.

ಹಾಗಾಗಿ 1 ನೇ ದಾವಾಸ್ತಿ ಸರ್ವೆ ನಂ 141 ರಲ್ಲಿ 2 ಎಕರೆ 9 ಗುಂಟೆ ಮತ್ತು 2 ನೇ ದಾವಾಸ್ತಿಯಾದ ಸರ್ವೆ ನಂ6/1 ಎ ರಲ್ಲಿ 1 ಎಕರೆ 28 ಗುಂಟೆ ದಾವಾಸ್ತಿಗಳಲ್ಲಿ ಮಾತ್ರ ನಾವು ಹಕ್ಕುದಾರರು ಎಂದರೆ ಸರಿ. ನನ್ನ ತಂದೆ ಯಲ್ಲಪ್ಪ, ಅವರ ಸಹೋದರರಾದ ಹಳ್ಳಪ್ಪ, ನಾಗಪ್ಪ, ಭೀಮಪ್ಪ, ತುಳಜಪ್ಪ ರವರು ಯಾವುದೇ ನೊಂದಾಯಿತ ಪಾಲುಪತ್ರವನ್ನು ಮಾಡಿಕೊಂಡಿರಲಿಲ್ಲ ಎಂದರೆ ಸರಿ. ಸದರಿಯವರು ಜುಬಾನಿ ಹಿಸ್ಸೆಯಂತೆ 50 ವರ್ಷಗಳ ಹಿಂದೆ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅಸಲು ದಾವಾ ನಂ 91/2015 ರಲ್ಲಿ ನಾನು 2 ನೇ ಪ್ರತಿವಾದಿಯಾದ ಕಾರಣ ಸದರಿ ದಾವಾ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ.

1 ನೇ ಪ್ರತಿವಾದಿ ನನ್ನ ಅಕ್ಕನಾಗಿದ್ದು ಸದರಿಯವರು ಅಸಲು ದಾವಾ ನಂ 70/2010 ರಂತೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಚನ್ನಗಿರಿಯಲ್ಲಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 11 ನೇ ಪ್ರತಿವಾದಿ ಎಂದರೆ ಸರಿ. ಸದರಿ ದಾವೆಯ ಬಗ್ಗೆಯೂ ಸಹ ನನಗೆ ಸಂಪೂರ್ಣ

ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಚನ್ನಗಿರಿಯಲ್ಲಿ ಅಸಲು ದಾವಾ ನಂ 26/2014 ರಂತೆ ದಾವಾ ಹೂಡಿದ್ದೆನು ಎಂದರೆ ಸರಿ. ಪ್ರಧಾನ ಸಿವಿಲ್ ನ್ಯಾಯಾಲಯ, ಚನ್ನಗಿರಿಯಲ್ಲಿ ಅಸಲು ದಾವಾ ನಂ 237/2008 ರ ದಾವೆಯ ಬಗ್ಗೆಯೂ ಸಹ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ಸದರಿ ಎಲ್ಲಾ 4 ದಾವೆಗಳಲ್ಲಿ ನಾನು ಪಕ್ಷಗಾರಳಾಗಿ ಇರುವುದರಿಂದ ದಿಃ10-10-2006 ರಂದು ನನ್ನ ತಂದೆ 1 ನೇ ಪ್ರತಿವಾದಿಯ ಪರವಾಗಿ ಮಾಡಿರುವ ನೊಂದಾಯಿತ ದಾನಪತ್ರದ ಬಗ್ಗೆಯೂ ಸಹ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 30-07-2008 ರಂದು ಈ ದಾವೆಯ 1 ನೇ ಪ್ರತಿವಾದಿಯವರು 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ನೊಂದಾಯಿತ ಕ್ರಯಪತ್ರ ಮಾಡಿದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ.

ಸದರಿ ದಾವೆ ಹೂಡುವ ಕಾಲಕ್ಕೆ ಸರ್ವೆ ನಂ 136/1 ರಲ್ಲಿನ 2 ಎಕರೆ 10 ಗುಂಟೆ ಮತ್ತು ಸರ್ವೆ ನಂ 136/3 ರಲ್ಲಿನ 4 ಎಕರೆ 20 ಗುಂಟೆ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ನನ್ನ ತಂದೆಗೆ ಸಂಬಂಧಪಟ್ಟ ಅಸ್ತಿಗಳೇ ಎಂದರೆ ಸರಿ. 1 ನೇ ದಾವಾಸ್ತಿಯಲ್ಲಿ ಪ್ರಸ್ತುತ ನಾನೇ ಸ್ವಾಧೀನಾನುಭವ ಹೊಂದಿ ಸಾಗು ಮಾಡುತ್ತಿದ್ದೆನೆ ಎಂದರೆ ಸರಿ. ಸರ್ವೆ ನಂ 136/3 ರಲ್ಲಿನ 1 ಎಕರೆ 33 ಗುಂಟೆ ಮತ್ತು ಸರ್ವೆ ನಂ 136/1 ರಲ್ಲಿನ 2 ಎಕರೆ 10 ಗುಂಟೆ ಪೈಕಿ 1 ಎಕರೆ ಜಮೀನಿನ ಸ್ವಾಧೀನದಲ್ಲಿ ನಾನೇ ಇದ್ದೆನೆ ಎಂದರೆ ಸರಿ. ಸದರಿ ಎಲ್ಲಾ 3 ಆಸ್ತಿಗಳು ನನ್ನ ಪಾಲಿಗೆ ಬಂದಿರುವ ಆಸ್ತಿಗಳು ಎಂದರೆ ಸರಿ. ಉಳಿದ ದಾವಾಸ್ತಿಗಳು 1 ಮತ್ತು 2 ನೇ ಪ್ರತಿವಾದಿಗಳ ಪಾಲಿಗೆ ಬಂದಿರುವಂತಹ ಆಸ್ತಿ ಎಂದರೆ ಸರಿ.

ಈ ದಾವೆಯ 6 ರಿಂದ 8 ನೇ ದಾವಾಸ್ತಿಗಳು ನನ್ನ ತಂದೆ ಯಲ್ಲಪ್ಪನವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ.ಸಂರಿ 3 ಆಸ್ತಿಗಳನ್ನು ನನ್ನ ತಂದೆ ದಿಃ 10-10-2006 ರಂದು 8 ನೇ ದಾವಾಸ್ತಿಯಲ್ಲಿನ 2 ಎಕರೆ 20 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ದಿಃ30-07-2008 ರಂದು ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 3 ನೇ ದಾವಾಸ್ತಿಯಲ್ಲಿನ 2 ಎಕರೆ 9 ಗುಂಟೆ ಜಮೀನು ನನ್ನ ತಂದೆಯಹಿಸ್ಸೆಗೆ ಬಂದಿರುವುದಿಲ್ಲ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.